ಇಂದು ದಿನಾಂಕ **09-11-2023** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದ</u>**

ಇಂದು ನಾನು ನ್ಯಾಯಾಲಯಕ್ಕೆ ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಹಾಗೂ ಸಂಗತಿಗಳು ನಿಜವಿರುತ್ತವೆ.

ಸಾಕ್ಷಿ ಮುಂದುವರೆದು ನಾನು ಈಗ ನೋಡುತ್ತಿರುವ ನಿಪಿ 4 ಮೃತ್ಯು ಪತ್ರದಲ್ಲಿರುವ ನನ್ನ ಸಹಿಯನ್ನು ನೋಡಿ ಗುರುತಿಸುತ್ತಿದ್ದೇನೆ. ಸಾಕ್ಷಿ ಸಹಿಯನ್ನು ನಿಪಿ 4(ಬಿ) ಎಂದು ಗುರುತಿಸಲಾಯಿತು. ಸದರೀ ಪತ್ರವನ್ನು ಬರೆದುಕೊಟ್ಟ ಯಲ್ಲವ್ವಳು ಹೆಬ್ಬಟ್ಟಿನ ಗುರುತನ್ನು ಮೃತ್ಯು ಪತ್ರಕ್ಕೆ ಹಾಕಿರುತ್ತಾರೆ.

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

ನಾನು 7 ವರ್ಷಗಳಿಂದ ವಕೀಲ ವೃತ್ತಿ ಮಾಡುತ್ತಿದ್ದೇನೆ. ನಾನು ವಕೀಲರ ಸಂಘದ ಸದಸ್ಯನಾಗಿರುತ್ತೇನೆ. ದಿಃ 25-07-2018 ರಂದು ಮೃತ್ಯು ಪತ್ರ ವನ್ನು ತಯಾರಿಸಿರುತ್ತೇನೆ. ಮೃತ್ಯು ಪತ್ರಕ್ಕೆ ಮಾಹಿತಿಯನ್ನು ಅದನ್ನು ಬರೆಸಿದ ಯಲ್ಲವ್ವಳು ನೀಡಿರುತ್ತಾಳೆ. ಅವಳೊಂದಿಗೆ ಸಾಕ್ಷಿದಾರರಾದ ಲಕ್ಷಣ ಶಿವಮ್ಮನವರ, ಯಲ್ಲಪ್ಪ ಗೌಡರ, ಹನುಮಂತ ಗೌಡಣ್ಣನವರ ಮತ್ತು ಮಂಜುನಾಥ ಹುಡೇದ ಬಂದಿದ್ದರು.ಸದರೀ ಯಲ್ಲವ್ವ ಸಾಕ್ಷಿದಾರರೊಂದಿಗೆ ನನ್ನ ಬಳಿ ನ್ಯಾಯಾಲಯಕ್ಕೆ ಖುದ್ದಾಗಿ ಬಂದಿದ್ದರು. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ದ 2ನೇ ಪ್ಯಾರಾದಲ್ಲಿ ಪೋತಿ ಯಲ್ಲವ್ವ ಬುದ್ದಿವಂತ

ಶಿವಮ್ಮನವರ ಇವರು ನನಗೆ ಒಂದು ಮೃತ್ಯು ಪತ್ರವನ್ನು ಮಾಡಬೇಕು ಅಂತಾ ಬರಲು ಹೇಳಿದ ಪ್ರಕಾರ ನಾನು ದಿಃ 25-07-2018 ರಂದು ಸಿವಿಲ್ ಕೋರ್ಟ ಆವರಣಕ್ಕೆ ಬಂದು ಅವರನ್ನು ಭೇಟಿಯಾದೆನು ಎಂದು ಹೇಳಿರುತ್ತೇನೆ ಎಂದರೆ ನಿಜ.

ನನಗೆ ಯಲ್ಲವ್ವಳ ಪರಿಚಯ ಮೊದಲಿನಿಂದಲೂ ಯಲ್ಲಪ್ಪ ಗೌಡರ ಮೂಲಕ ಇತ್ತು. ಯಲ್ಲಪ್ಪ ಗೌಡರರವರ ಯಾವುದೇ ಪ್ರಕರಣ ನನ್ನ ಬಳಿ ಇರಲಿಲ್ಲಾ ಎಂದರೆ ನಿಜ. ಮೃತ್ಯು ಪತ್ರ ತಯಾರಿಸು ಪೂರ್ವದಲ್ಲಿ ಯಲ್ಲವ್ವಳು ನನಗೆ ಆಸ್ತಿಯ ಪಹಣಿ ಪತ್ರಿಕೆ ಮತ್ತು ತನ್ನ ಆಧಾರ ಕಾರ್ಡನ್ನು ನೀಡಿದ್ದು ಅವುಗಳನ್ನು ಪರೀಶಿಲಿಸಿರುತ್ತೇನೆ. ನಾನು ಆ ದಿನ ಮೂರು ಪಹಣಿ ಪತ್ತಿಕೆಗಳನ್ನು ಪರೀಶೀಲಿಸಿದ್ದು ಸದರೀ ಜಮೀನುಗಳ ಸರ್ವೆ ನಂಬರಗಳನ್ನು ಹೇಳಲು ಬರುವುದಿಲ್ಲಾ. ಅವುಗಳ ಕ್ಷೇತ್ರ 5 ಎಕರೆ ಹಾಗೂ ತಲಾ 2 ಎಕರೆ ಜಮೀನುಗಳು ಇದ್ದವು. ಸದರೀ ಜಮೀನುಗಳು ನವಲೂರು ಗ್ರಾಮದ ಜಮೀನುಗಳು ಆಗಿದ್ದವು. ಸದರೀ ಜಮೀನುಗಳ ಕ್ಷೇತ್ರವನ್ನು ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲಾ. ಅದೇ ರೀತಿ ಮೂರೂ ಜಮೀನುಗಳು ನವಲೂರಿನ ಜಮೀನುಗಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲಾ.

ಮೃತ್ಯು ಪತ್ರ ಬರೆಯುವಾಗ ಯಲ್ಲವ್ವಳಿಗೆ ಸುಮಾರು 70-72 ವರ್ಷ ವಯಸ್ಸಾಗಿತ್ತು. ನಾನು ಆಕೆಯ ವಯಸ್ಸನ್ನು ಅಂದಾಜು ಹೇಳುತ್ತಿದ್ದೇನೆ. ಆಕೆಯ ಆಧಾರ ಕಾರ್ಡನಲ್ಲಿ ವಯಸ್ಸು ನಮೂದು ಇತ್ತು ಎಂದರೆ ನಿಜ. ಆಧಾರ ಕಾರ್ಡನಲ್ಲಿ ಆಕೆಯು ಯಾವ ವರ್ಷ ಜನಿಸಿದ್ದಳು ಎಂದು ನಮೂದಿಸಿತ್ತು ಆದರೆ ನನಗೆ ಈಗ ಹೇಳಲು ನೆನಪಿಲ್ಲಾ. ಆಕೆಯ ವಯಸ್ಸು ಸುಮರು 70-72 ವರ್ಷ ಎಂದು

ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲಾ.

ಮೃತ್ಯು ಪತ್ರವನ್ನು ರೂ. **500/-** ಮುಖ ಬೆಲೆಯ ಚಾಪಾ ಕಾಗದದ ಮೇಲೆ ತಯಾರಿಸಲಾಗಿರುತ್ತದೆ. ಸದರೀ ಚಾಪಾ ಕಾಗದವನ್ನು ನನ್ನ ಬಳಿ ಯಲ್ಲಪ್ಪ ಗೌಡರ ತಂದು ಕೊಟ್ಟಿರುತ್ತಾರೆ, ಸಾಕ್ಷಿ ಮುಂದುವರೆದು ಚಾಪಾ ಕಾಗದ ತರಲು ಯಲ್ಲಪ್ಪ ಗೌಡರರವರೊಂದಿಗೆ ನಾನೂ ಸಹ ಹೋಗಿದ್ದೆ ಎಂದು ಹೇಳುತ್ತಾರೆ. ನಾನು ನೋಡಿದ್ದ ಪಹಣಿ ಪತ್ರಿಕೆಗಳ ಪ್ರಕಾರ ಜಮೀನುಗಳು ಯಲ್ಲವ್ವ ಶಿವಮ್ಮನವರ ಇವರ ಹೆಸರಿನಿಂದ ಇದ್ದವು. ಈಗ ನಾನು ನೋಡುತ್ತಿರುವ ನಿಪಿ **1** ಪಹಣಿ ಪತ್ರಿಕೆಯಲ್ಲಿ ಯಲ್ಲವ್ವಳ ಹೆಸರು ನಮೂದು ಇರುವುದಿಲ್ಲಾ ಎಂದರೆ ನಿಜ. ಅದೇ ರೀತಿ ನಿಪಿ **2** ಪಹಣಿ ಪತ್ರಿಕೆಯಲ್ಲಿ ಮಾಲೀಕರ ಕಾಲಂ ನಲ್ಲಿ ಯಲ್ಲವ್ವಳ ಹೆಸರು ನಮೂದು ಇರುವುದಿಲ್ಲಾ ಎಂದರೆ ನಿಜ, ಆದರೆ ವ್ಯವಸಾಯಗಾರ ಕಾಲಂ ನಲ್ಲಿ ಅವಳ ಹೆಸರು ಇರುತ್ತದೆ ಎಂದು ಸಾಕ್ಷಿ ಹೇಳುತ್ತಾರೆ. ಅದೇ ರೀತಿ ನಿಪಿ **3** ಪಹಣಿ ಪತ್ರಿಕೆಯಲ್ಲಿ ಯಲ್ಲವ್ವ ಹೆಸರು ನಮೂದು ಇರುವುದಿಲ್ಲಾ ಎಂದರೆ ಸಾಕ್ಷಿ ವ್ಯವಸಾಯಗಾರ ಕಾಲಂನಲ್ಲಿ ನಮೂದು ಇರುತ್ತದೆ ಎಂದು ಹೇಳುತ್ತಾರೆ.

ನಿಪಿ **4** ಮೃತ್ಯು ಪತ್ರದಲ್ಲಿ ಕಂಡು ಬರುವ ಯಲ್ಲವ್ವಳ ಹೆಬ್ಬಟ್ಟಿನ ಗುರುತುಗಳನ್ನು ಗುರುತಿಸಿ ಯಾರೂ ಸಹಿ ಮಾಡಿರುವುದಿಲ್ಲಾ ಎಂದರೆ ನಿಜ. ಆದರೆ ಹೆಬ್ಬಟ್ಟುಗಳನ್ನು ಗುರುತಿಸಲಾಗಿದೆ ಎಂದು ಬರೆಯಲಾಗಿರುತ್ತದೆ.

ನಿಪಿ **4** ಮೃತ್ಯು ಪತ್ರದಲ್ಲಿ ಕಂಡುಬರುತ್ತಿರುವ ಹೆಬ್ಬಟ್ಟಿ ಗುರುತು ಗಳು ಯಲ್ಲವ್ವಳ ಹೆಬ್ಬಟ್ಟಿನ ಗುರುತುಗಳು ಆಗಿರುವುದಿಲ್ಲಾ ಎನ್ನುವುದು ಸರಿಯಲ್ಲಾ. ಯಲ್ಲವ್ವಳು ಯಾವಾಗ ಮೃತಪಟ್ಟಳು ಎಂದು ನನಗೆ ಗೊತ್ತಿಲ್ಲಾ. ದಿಃ **26-07-2018** ರಂದೇ ಯಲ್ಲವ್ವಳು ಮೃತಪಟ್ಟಿರುವ

ವಿಷಯ ನನಗೆ ಗೊತ್ತಿದ್ದರೂ ಸಹ ಗೊತ್ತಿಲ್ಲಾ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲಾ. ನಿಪಿ **4** ರಲ್ಲಿ **2**ನೇ ಪುಟದ ಕೊನೆಯ ಪ್ಯಾರಾದಲ್ಲಿ ಕಾಣಿಸಿರುವ ದಿಃ **19-11-2004** ರ ಮೃತ್ಯು ಪತ್ರದ ದೃಡೀಕೃತ ನಕಲನ್ನು ನೋಡಿರುತ್ತೇನೆ. ಸದರೀ ದಾಖಲೆಯು ನನ್ನ ಕಚೇರಿಯಲ್ಲಿರುತ್ತದೆ. ಯಲ್ಲವ್ವಳು ಮೃತಪಡುವ ಸುಮಾರು **6** ತಿಂಗಳುಗಳಿಂದ ಹಾಸಿಗೆ ಹಿಡಿದಿದ್ದು ಅವಳು ಸಂಪೂರ್ಣ ಅನಾರೋಗ್ಯ ಪಿಡೀತಳಾಗಿದ್ದ ಕಾರಣ ಓಡಾಡುವ ಸ್ಥಿತಿಯಲ್ಲಿರಲಿಲ್ಲಾ ಎನ್ನುವುದು ಸರಿಯಲ್ಲಾ. ಅದೇ ರೀತಿ ಮೃತಪಡುವ ಪೂರ್ವದಲ್ಲಿ ಸುಮಾರು **4-5** ದಿನಗಳಿಂದ ಅವಳು ಊಟ ಮಾಡುವ ಪರಿಸ್ಥಿತಿಯಲ್ಲಿ ಇರಲಿಲ್ಲಾ ಹಾಗೂ ದಿಃ **25-07-2018** ರಂದು ಯಲ್ಲವ್ವಳು ನನ್ನ ಬಳಿ ಬಂದಿಲ್ಲಾ ಮತ್ತು ಮೃತ್ಯು ಪತ್ರ ಬರೆಸಿಲ್ಲಾ ಎನ್ನುವುದು ಸರಿಯಲ್ಲಾ.

ನಾನು ನೋಡಿದ್ದ ನೊಂದಾಯಿತ ಮೃತ್ಯು ಪತ್ರದ ದೃಡೀಕೃತ ನಕಲಿನಲ್ಲಿ ಕಂಡು ಬಂದಿದ್ದ ಹೆಬ್ಬಟ್ಟಿ ಗುರುತುಗಳು ಯಲ್ಲವ್ವಳ ಹೆಬ್ಬಟ್ಟಿನ ಸಹಿಗಳಾಗಿದ್ದು ನಿಪಿ 4 ಮೃತ್ಯು ಪತ್ರದಲ್ಲಿರುವ ಹೆಬ್ಬಟ್ಟಿನ ಸಹಿಗಳು ಯಲ್ಲವ್ವಳ ಸಹಿಗಳು ಆಗಿರುವುದಿಲ್ಲಾ ಎನ್ನುವುದು ಸರಿಯಲ್ಲಾ. ನನ್ನ ಬಳಿ ಇರುವ ಸದರೀ ಮೃತ್ಯು ಪತ್ರದ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲಾ ಎಂದರೆ ನಿಜ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ನಾನು ಮೃತ್ಯು ಪತ್ರ ತಯಾರಿಸಲು ಯಾವ ಯಾವ ದಾಖಲೆಗಳನ್ನು ಪರಿಶೀಲಿಸಿರುತ್ತೇನೆ ಎಂದು ಕಾಣಿಸಿಲ್ಲಾ ಎಂದರೆ ನಿಜ. ನಾನು ಹಾಗೂ ವಾದಿ ಉಳಿದ ಸಾಕ್ಷಿದಾರರೊಂದಿಗೆ ಮಿಲಾಪೆಯಾಗಿ ಯಲ್ಲವ್ವಳು ಪ್ರತಿವಾದಿ ನಂ. **1,3** ಮತ್ತು **4** ಇವರಿಗೆ ಮಾಡಿಕೊಟ್ಟಿದ್ದ ಮೃತ್ಯು ಪತ್ರವನ್ನು ನಷ್ಟಪಡಿಸುವ ಉದ್ದೇಶದಿಂದ ಹಾಗೂ ದಾವಾ ಆಸ್ತಿಗಳನ್ನು ಪಡೆದುಕೊಳ್ಳುವ

ಉದ್ದೇಶದಿಂದ ನಿಪಿ 4 ರಂತೆ ಖೊಟ್ಟಿ ಮೃತ್ಯು ಪತ್ರವನ್ನು ತಯಾರಿಸಿದ್ದು ಯಲ್ಲವ್ವಳು ಸದರೀ ಮೃತ್ಯು ಪತ್ರವನ್ನು ಮಾಡಿರುವುದಿಲ್ಲಾ ಎನ್ನುವುದು ಸರಿಯಲ್ಲಾ. ದಿಃ 19-04-2004 ರ ಮೃತ್ಯು ಪತ್ರಕ್ಕೆ ಯಾರು ಯಾರು ಸಹಿ ಮಾಡಿದ್ದರು ಎಂದು ನಾನು ಗಮನಿಸಿರುವುದಿಲ್ಲಾ. ಸದರೀ ಮೃತ್ಯು ಪತ್ರಕ್ಕೆ ಪ್ರಸ್ತುತ ವಾದಿಯೇ ಸಾಕ್ಷಿದಾರನಾಗಿ ಸಹಿ ಮಾಡಿದ್ದು ನನಗೆ ಗೊತ್ತಿದ್ದರೂ ಸಹ ನಾನು ನೋಡಿಲ್ಲಾ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲಾ. ನಿಪಿ 4 ರಂತೆ ಯಲ್ಲವ್ವ ಯಾವುದೇ ಮೃತ್ಯು ಪತ್ರ ಮಾಡದೇ ಇದ್ದರೂ ವಾದಿಗೆ ಅನುಕೂಲವಾಗಲೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲಾ.

**(ಉಳಿದ ಪ್ರತಿವಾದಿಯರು ಮತ್ತು ಅವರ ಪರ ವಕೀಲರು ಗೈರು ಹಾಜರು ಇದ್ದು ಯಾರು ಪ್ರತಿನಿಧಿಸಿಲ್ಲವಾದ್ದರಿಂದ ಅವರ ಪರ ಪಾಟೀ ಸವಾಲು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ.

ಪ್ರ ಹಿ ದಿ ನ್ಯಾ ಹಾಗೂ ಸಿಜೆಎಂ
ಧಾರವಾಡ